ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.
<u>ಸಿ.ಸಿ.1138/2023</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಎಸ್.ಎಂ.ನಟೇಶ್ | ಪಿ.ಡಬ್ಲ್ಯೂ.1 |
| ತಂದೆಯ ಹೆಸರು | : | ಎಸ್.ಎಲ್.ಮೊಗಣ್ಣಗೌಡ | ಸಿ.ಡಬ್ಲ್ಯೂ.2 |
| ವಯಸ್ಸು | : | 59 ವರ್ಷ | |
| ವೃತ್ತಿ | : | ಸಹಪ್ರಾಧ್ಯಾಪಕರು, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, | |
| ವಾಸ | : | ಚಿಕ್ಕಮಗಳೂರು | |

<u>ದಿನಾಂಕಃ 18-03-2025 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-</u>

ನಾನು ಆಗಸ್ಟ್ 2017 ರಿಂದ ಇಲ್ಲಿಯವರೆಗೆ ಚಿಕ್ಕಮಗಳೂರಿನ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಹಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದ ಕಾಲಕ್ಕೆ ನಾನು ಸದರಿ ಕಾಲೇಜಿನಲ್ಲಿ ಪ್ರಭಾರೆ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ07.01.2023 ರಂದು ಬೆಳಗ್ಗೆಃ09.00 ಗಂಟೆ ಸಮಯದಲ್ಲಿ ನಾನು ಕಾಲೇಜಿನಲ್ಲಿ ಕರ್ತವ್ಯ ನಿರತನಾಗಿದ್ದಾಗ ಸಿ.ಇ.ನ್ ಪೊಲೀಸ್ ನವರು ನನ್ನ ಮುಂದೆ ಹಾಜರಾಗಿ ಮನವಿಯನ್ನ ಸಲ್ಲಿಸಿರುತ್ತಾರೆ. ಸದರಿ ಮನವಿಯಲ್ಲಿ ಚಿಕ್ಕಮಗಳೂರಿನ ಗೌರಿಕಾಲುವೆ 60 ಫೀಟ್ ರಸ್ತೆಯಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಆಗುತ್ತಿದೆ ಆ ಸಂಬಂಧ ದಾಳಿ ಕಾರ್ಯ

ಇದ್ದು ಪತ್ರಾಂಕಿತ ಅಧಿಕಾರಿಯಾಗಿ ಭಾಗವಹಿಸುವಂತೆ ಕೋರಿಕೊಳ್ಳಲಾಗಿತ್ತು. ಸದರಿ ಪತ್ರವನ್ನ ನಾನು ಸ್ವೀಕರಿಸಿ ಅದರ ಮೇಲೆ ಸಹಿ ಮಾಡಿರುತ್ತೇನೆ, ಸಾಕ್ಷಿಗೆ ಮನವಿಯನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು ಬೆಳಗ್ಗೆ:10.00 ಗಂಟೆಗೆ ಮನವಿಯನ್ನ ಆಧಾರಿಸಿ ಸಿ.ಇ.ನ್ ಪೊಲೀಸ್ ಠಾಣೆಗೆ ಹೋದೆ. ನಾನು ಸದರಿ ಠಾಣೆಗೆ ಹೋದಾಗ ಬೀಕನಹಳ್ಳಿ ಗ್ರಾಮ ಪಂಚಾಯಿತಿ ಪಿ.ಡಿ.ಓ ಪ್ರದೀಪ್ ಕುಮಾರ್ ಮತ್ತು ಅದೇ ಗ್ರಾಮಪಂಚಾಯಿತಿಯ ಕಾರ್ಯದರ್ಶಿ ಮಂಜಯ್ಯ ಇವರು ಪಂಚಸಾಕ್ಷಿಗಳಾಗಿ ಠಾಣೆಯಲ್ಲಿ ಹಾಜರಿದ್ದರು. ಠಾಣಾ ಆವರಣದಲ್ಲಿ ಬೆಳಗ್ಗೆ:10.00 ರಿಂದ 11.00 ಗಂಟೆಯವರೆಗೆ ದಾಳಿ ಪೊಲೀಸ್ ಸಿಬ್ಬಂದಿಗಳು ನನ್ನ ಮತ್ತು ಪಂಚಸಾಕ್ಷಿಗಳ ಅಂಗಶೋಧನೆ ಕಾರ್ಯ ಹಾಗೂ ಸ್ಥಳಕ್ಕೆ ಹೋಗಲು ಉಪಯೋಗಿಸಲು ಉದ್ದೇಶಿಸಿದ್ದ ಜೀಪಿನ ಶೋಧನಾ ಕಾರ್ಯ ನಡೆಯಿತು. ಈ ಸಂಬಂಧ ಮಹಜರ್ ಬರೆದು ಸದರಿ ಮಹಜರ್ ಗೆ ನಾನು, ಪಂಚಸಾಕ್ಷಿಗಳು ಮತ್ತು ಪೊಲೀಸರು ಸಹಿ ಮಾಡಿರುತ್ತೇವೆ. ಸದರಿ ಮಹಜರ್ ಕಾಲಕ್ಕೆ ಫೋಟೋ ಸಹ ತೆಗೆಯಲಾಗಿದೆ. ಸಾಕ್ಷಿಗೆ ಮಹಜರ್ ಅನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಫೋಟೋ ತೋರಿಸಲಾಗಿ ಅದನ್ನ ನೋಡಿ ಗುರುತಿಸಿದ್ದಾರೆ. ಫೋಟೋವನ್ನ ನಿಪಿ-3 ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ಕಾಣುವ ಸ್ಥಳ ಸಿ.ಇ.ಎನ್ ಪೊಲೀಸ್ ಠಾಣೆ ಆವರಣ ಆಗಿದ್ದು ಅದರಲ್ಲಿ

ನಾನು, ಪಂಚಸಾಕ್ಷಿಗಳು, ಪೊಲೀಸ್ ನವರು ಇದ್ದೇವೆ. ನಿಪಿ-3 ರ ಪೋಟೋದಲ್ಲಿ ದಾಳಿಗೆ ಹೋಗಲು ಉಪಯೋಗಿಸಿದ್ದ ವಾಹನಗಳು ಇವೆ. ದಾಳಿ ಪೂರ್ವ ಮಹಜರ್ ಕಾಲಕ್ಕೆ ನನ್ನ ಬಳಿ, ಪಂಚಸಾಕ್ಷಿಗಳ ಬಳಿ, ಪೊಲೀಸ್ ಸಿಬ್ಬಂದಿಗಳ ಬಳಿ ಮತ್ತು ವಾಹನಗಳಲ್ಲಿ ಯಾವುದೇ ಗಾಂಜಾ ಇಲ್ಲದೇ ಇರುವುದು ಖಚಿತಪಡಿಸಲಾಯಿತು. ಆನಂತರ ಠಾಣೆಯಿಂದ 11.00 ಗಂಟೆಗೆ ಹೊರಟು ಗೌರಿಕಾಲುವೆ 60 ಫೀಟ್ ರಸ್ತೆಗೆ ಬಂದೆವು. ನಾನೂ ಸಹ ಪೊಲೀಸರ ಜೀಪ್ ನಲ್ಲಿ ಸ್ಥಳಕ್ಕೆ ಹೋದೆ. ಘಟನಾ ಸ್ಥಳದಿಂದ ಸುಮಾರು 100 ರಿಂದ 150 ಮೀಟರ್ ದೂರದಲ್ಲಿ ನಿಂತು ನೋಡಿದಾಗ ಅಲ್ಲಿ 3 ಜನ ಆಸಾಮಿಗಳು ನಿಂತಿದ್ದರು. ಅವರ ಬಳಿ 2 ದ್ವಿಚಕ್ರ ವಾಹನಗಳು ಇದ್ದವು. ನಾವು ಸ್ವಲ್ಪ ಸಮಯ ವೀಕ್ಷಣೆ ಮಾಡಲಾಗಿ ಆ ಮೂರು ಜನರ ಬಳಿ ಯಾರೋ ಬರುತ್ತಿದ್ದರು ಮತ್ತು ಮಾತನಾಡಿಕೊಂಡು ಹೋಗುತ್ತಿದ್ದರು. ಅದನ್ನ ಗಮನಿಸಿ ನಾವು ಮತ್ತು ಪೊಲೀಸರು ಮೂರು ಜನರ ಬಳಿ ಹೋದೆವು. ನಮ್ಮನ್ನ ನೋಡಿ ಆ ಮೂರು ಜನ ಆಸಾಮಿಗಳು ಓಡಿ ಹೋಗಲು ಪ್ರಯತ್ನಿಸಿದರು. ಆಗ ಪೊಲೀಸರು ಅವರನ್ನ ಹಿಡಿದಿರುತ್ತಾರೆ. ಅವರ ಹೆಸರು ಮತ್ತು ವಿಳಾಸವನ್ನ ಕೇಳಲಾಗಿ ಅವರ ಹೆಸರು ಇಬ್ರಾಹಿಂ, ಪ್ರಜ್ವಲ್ ಹಾಗೂ ಸಂಶಿರ್ ಎಂದು ತಿಳಿಯಿತು. ನಾನು ಆರೋಪಿತರ ಬಳಿ ನನ್ನ ಮುಖಾಂತರ ಅಂಗಶೋಧನೆಗೆ ಒಳಗಾಗುತ್ತಿರೋ ಅಥವಾ ಪೊಲೀಸರ ಮುಖಾಂತರ ಅಂಗಶೋಧನೆಗೆ ಒಳಗಾಗುತ್ತಿರೋ ಎಂದು ಕೇಳಿದಾಗ ಸದರಿಯವರು  ನನ್ನ ಮುಖಾಂತರ ಅಂಗಶೋಧನೆಗೆ ಸಮ್ಮತಿಸಿದರು. ಈ ಸಂಬಂಧ ಆರೋಪಿತರಿಗೆ ಪ್ರತ್ಯೇಕ ನೋಟೀಸ್ ಜಾರಿ ಮಾಡಲಾಯಿತು. ಸಾಕ್ಷಿಗೆ ನೋಟೀಸ್ ಗಳನ್ನ

ತೋರಿಸಲಾಗಿ ಅವುಗಳ ಮೇಲೆ ಇರುವ ತನ್ನ ಸಹಿಗಳನ್ನ ನೋಡಿ ಗುರುತಿಸಿದ್ದಾರೆ. ಅವುಗಳನ್ನು ನಿಪಿ-4 ರಿಂದ ನಿಪಿ-6 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಯಿಂದ ನಿಪಿ-6(ಎ) ಎಂದು ಗುರುತಿಸಲಾಯಿತು. ಆರೋಪಿತರು ಸಮ್ಮತಿಸಿದ ಮೇರೆಗೆ ಅವರ ಅಂಗಶೋಧನೆಯನ್ನ ಪಂಚರು ಮತ್ತು ಪೊಲೀಸರ ಸಮಕ್ಷಮದಲ್ಲಿ ನೆರವೇರಿಸಿದೆ. ಆ ಕಾಲಕ್ಕೆ ಪ್ರಜ್ವಲ್ ಮತ್ತು ಸಂಶೀರ್ ಇವರ ಜೇಬಿನಲ್ಲಿ ಹಣ ಇತ್ತು. ಪ್ರಜ್ವಲ್ ಈತನ ಜೇಬಿನಲ್ಲಿ 500 ರೂಪಾಯ ಮುಖಬೆಲೆಯ ಹಾಗೂ 200 ರೂಪಾಯಿ ಮುಖಬೆಲೆಯ 2 ನೋಟುಗಳು ಇದ್ದವು. ಸಂಶೀರ್ ಈತನ ಜೇಬಿನಲ್ಲಿ 500 ರೂಪಾಯಿ ಮುಖಬೆಲೆಯ ಹಾಗೂ 100 ರೂಪಾಯಿ ಮುಖಬೆಲೆಯ 2 ನೋಟುಗಳು ಇದ್ದವು. ಆನಂತರ ಆರೋಪಿತರ ಬಳಿ ನಿಂತಿದ್ದ 2 ದ್ವಿಚಕ್ರ ವಾಹನಗಳನ್ನ ಪರಿಶೀಲನೆ ಮಾಡಲಾಯಿತು. ಸಾಕ್ಷಿ ಮುಂದುವರಿದು ಈಗ ವಾಹನಗಳ ನಿರ್ದಿಷ್ಟ ನೊಂದಣಿ ಸಂಖ್ಯೆ ನೆನಪಿಲ್ಲ ಆದರೆ ಅವು ಚಿಕ್ಕಮಗಳೂರು ಜಿಲ್ಲೆಯ ನೊಂದಣಿ ಸಂಖ್ಯೆಯನ್ನ ಹೊಂದಿದ್ದವು ಎನ್ನುತ್ತಾರೆ. ಎರಡು ವಾಹನಗಳು ಹೊಂಡಾ ಡಿಯೋ ಆಗಿದ್ದವು, ಒಂದು ವಾಹನದ ಡಿಕ್ಕಿಯನ್ನ ತೆರೆದಾಗ ಅದರಲ್ಲಿ ಹಳದಿ ಬಟ್ಟೆ ಗಂಟು ಇತ್ತು. ಅದನ್ನ ಬಿಚ್ಚಿ ನೋಡಿದಾಗ ಅದರಲ್ಲಿ ಕಡ್ಡಿ, ಹೂವು, ಸೋಪ್ಪು ಮಿಶ್ರಿತ ಗಾಂಜಾ ಇತ್ತು. ಇನ್ನೊಂದು ವಾಹನವನ್ನ ಪರಿಶೀಲನೆ ಮಾಡಲಾಗಿ ಅದರಲ್ಲಿ ಯಾವುದೇ ಮಾಲು ಇರಲಿಲ್ಲ. ಆರೋಪಿತರ ಬಳಿ ದ್ವಿಚಕ್ರ ವಾಹನಗಳ ಬಗ್ಗೆ ಕೇಳಲಾಗಿ ಒಂದು ವಾಹನ ಇಬ್ರಾಹಿಂ ಇವರಿಗೆ ಸೇರಿದ್ದು ಎಂದು ತಿಳಿಯಿತು. ದೊರೆತ ಮಾಲನ್ನ ಪೊಲೀಸರು ತಂದಿದ್ದ ಡಿಜಿಟಲ್ ಸ್ಕೇಲ್ ಮುಖಾಂತರ ಅಳತೆ ಮಾಡಲಾಗಿ 175 ಗ್ರಾಂ. ಗಾಂಜಾ

ಇತ್ತು. ಸದರಿ ಗಾಂಜಾದ ಬಗ್ಗೆ ಆರೋಪಿತರ ಬಳಿ ವಿಚಾರ ಮಾಡಿದಾಗ ಸದರಿಯವರು ಯಾರೋ ಅಪರಿಚಿತ ವ್ಯಕ್ತಿ ಗಾಂಜಾ ಕೊಟ್ಟಿರುತ್ತಾನೆ ಅದನ್ನ ತಾವು 5 ಸಾವಿರ ರೂಪಾಯಿಗೆ ಖರೀದಿ ಮಾಡಿರುವುದಾಗಿ ತಿಳಿಸಿರುತ್ತಾರೆ, ಸದರಿ ಮಾಲನ್ನ ಮಾರಾಟ ಮಾಡಲು ಸ್ವಾಧೀನ ಹೊಂದಿರುವುದಾಗಿ ತಿಳಿಸಿದರು. ತಮ್ಮ ಬಳಿ ಇದ್ದ ಹಣ ಭಾಗಶಃ ಮಾಲು ಮಾರಾಟ ಮಾಡಿ ಬಂದಿದ್ದಾಗಿ ತಿಳಿಸಿರುತ್ತಾರೆ. ತೂಕ ಮಾಡಿದ ನಂತರ ದೊರೆತ ಮಾಲನ್ನ ಪ್ಯಾಕ್ ಮಾಡಿ ಅದಕ್ಕೆ ಮೊಹರು ಹಾಕಲಾಯಿತು. ಅದೇ ರೀತಿ ದೊರೆತ ದುಡ್ಡನ್ನೂ ಸಹ ಒಂದು ಕವರ್ ಗೆ ಹಾಕಿ ಮೊಹರು ಮಾಡಲಾಯಿತು. ಈ ಸಂಬಂಧ ಬೆಳಗ್ಗೆ:11.50 ರಿಂದ ಮಧ್ಯಾಹ್ನ:01.20 ರವರೆಗೆ ಮಹಜರ್ ಬರೆಯಲಾಯಿತು. ಮಹಜರ್ ಕಾಲಕ್ಕೆ ಫೋಟೋ ತೆಗೆಯಲಾಗಿದೆ. ಮಹಜರ್ ಗೆ ನಾನು, ಚಾಸಾ-3, 4, ಪೊಲೀಸರು ಸಹಿ ಮಾಡಿರುತ್ತೇವೆ. ಮಹಜರ್ ಕಾಲಕ್ಕೆ ಸ್ಥಳದ ನಕಾಶೆ ಸಹ ಬರೆಯಲಾಯಿತು. ಸದರಿ ನಕಾಶೆ ಮೇಲೆ ಸಹ ನಾನು ಮತ್ತು ಪಂಚಸಾಕ್ಷಿಗಳು ಹಾಗೂ ಇತರರು ಸಹಿ ಮಾಡಿರುತ್ತೇವೆ. ಸಾಕ್ಷಿಗೆ ಮಹಜರ್ ಅನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-7 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಕಾಶೆಯನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-8 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಫೋಟೋ ತೋರಿಸಲಾಗಿ ಅದನ್ನ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-9 ಎಂದು

ಗುರುತಿಸಲಾಯಿತು. ನಿಪಿ-9 ರಲ್ಲಿ ನಾನು, ಪಂಚಸಾಕ್ಷಿಗಳು, ಪೊಲೀಸರು ಇರುತ್ತೇವೆ. ನಿಪಿ-9 ರ ಫೋಟೋದಲ್ಲಿ ಆರೋಪಿತರು ಕೂತಿರುತ್ತಾರೆ ಹಾಗೂ ಅವರು ಉಪಯೋಗಿಸಿದ್ದ ಡಿಯೋ ದ್ವಿಚಕ್ರ ವಾಹನಗಳೂ ಸಹ ಇವೆ. ಅಮಾನತ್ತುಪಡಿಸಿದ ಮಾಲು ತೂಕ ಮಾಡುತ್ತಿರುವುದು ಕಂಡುಬರುತ್ತಿದೆ. ನಿಪಿ-9 ರಲ್ಲಿ ಕಾಣುವ ಜಾಗ ಗೌರಿಕಾಲುವೆ 60 ಫೀಟ್ ರಸ್ತೆ ಬಳಿ ಇದ್ದು ಅಲ್ಲಿ ಒಂದು ಕಾಂಪ್ಲೆಕ್ಸ್ ಇದ್ದು ಅದರ ಬಳಿ ಒಂದು ಖಾಲಿ ಜಾಗ ಇರುತ್ತದೆ. ಮಹಜರ್ ಕಾಲಕ್ಕೆ ಇಬ್ರಾಹಿಂ ಮತ್ತು ಸಂಶೀರ್ ಇವರ ಬಳಿ ಇದ್ದ ಓಪ್ಪೋ ಕಂಪನಿಯ ಒಂದು ಮೊಬೈಲ್ ಮತ್ತು ಇನ್ನೊಂದು ಮೊಬೈಲ್ ಅನ್ನ ಅಮಾನತ್ತುಪಡಿಸಿಕೊಳ್ಳಲಾಯಿತು. ಆರೋಪಿತರ ಬಳಿ ಅಮಾನತ್ತುಪಡಿಸಿದ ಹಣ ಒಟ್ಟು ರೂ.1,400/- ಆಗಿತ್ತು. ನಿಪಿ-7 ರ ಅಡಿ ಅಮಾನತ್ತುಪಡಿಸಿದ ಮಾಲು, ಹಣ, 2 ಮೊಬೈಲ್ ಗಳು ನ್ಯಾಯಾಲಯದ ಮುಂದೆ ಇದ್ದು ಅವುಗಳನ್ನ ನೋಡಿ ಗುರುತಿಸಿದ್ದೇನೆ. ಮಾಲನ್ನ ಮು.ಮಾ.1 ಎಂದು, ರೂ.1,400/- ಹಣವನ್ನ ಮು.ಮಾ.2 ಎಂದು ಹಾಗೂ 2 ಮೊಬೈಲ್ ಗಳನ್ನ ಮು.ಮಾ.3 ಮತ್ತು 4 ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿದ ಮಾಲುಗಳ ಮೇಲೆ ನನ್ನ, ಪಂಚಸಾಕ್ಷಿಗಳು ಮತ್ತು ಚಾಸಾ-1 ರವರ ಸಹಿ ಇರುವ ಚೀಟಿಯನ್ನ ಅಂಟಿಸಲಾಯಿತು ಮತ್ತು ಸದರಿ ಚೀಟಿ ನ್ಯಾಯಾಲಯದ ಮುಂದೆ ಇರುವ ಮು.ಮಾ.ಗಳ ಮೇಲೆ ಇದೆ. ನಾನು ತನಿಖಾಧಿಕಾರಿ ಮುಂದೆ ಈ ಪ್ರಕರಣದ ಸಂಬಂಧ ಹೇಳಿಕೆ ನೀಡಿರುತ್ತೇನೆ, ಆರೋಪಿತರನ್ನ ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿತರು ನ್ಯಾಯಾಲಯದ ಮುಂದೆ ಗೈರು

ಹಾಜರಿದ್ದು ಆರೋಪಿ ಪರ ವಕೀಲರು ಸಾಕ್ಷಿ ಆರೋಪಿತರನ್ನ ಗುರುತಿಸಲು ತಕರಾರು ಇಲ್ಲ ಎಂದು ಅರ್ಜಿ ಸಲ್ಲಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿಗಳ ಪರಃ ಶ್ರೀ ವೈ.ಎಸ್.ಆರ್. ವಕೀಲರಿಂದಃ-

ಪೊಲೀಸರು ನೋಟೀಸ್ ಜಾರಿ ಮಾಡಿದರು ಎಂದು ಹೇಳಲಾದ ಕಾಲಕ್ಕೆ ನಾನು ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನಾನು ಪ್ರಭಾರೆ ಪ್ರಾಂಶುಪಾಲರಾಗಿ ಆ ದಿನ ಕರ್ತವ್ಯ ನಿರ್ವಹಿಸುತ್ತಿದ್ದರಿಂದ ಆ ದಿನ ಯಾವುದೇ ತರಗತಿ ಇರಲಿಲ್ಲ. ಪ್ರತಿ ದಿನ ಕಾಲೇಜು ಬೆಳಗ್ಗೆ09.00 ರಿಂದ 03.00 ಗಂಟೆಯವರೆಗೆ ಇರುತ್ತದೆ. ನಿಮ್ಮ ವಿವರ ಪೊಲೀಸರಿಗೆ ನೋಟೀಸ್ ನಲ್ಲಿ ಬರೆಯಲು ಮಾಹಿತಿ ಇತ್ತಾ ಎಂದರೆ ಸಾಕ್ಷಿ ಚಾಸಾ-1 ರವರು ನನಗೆ ಪರಿಚಯಸ್ಥರು ಮತ್ತು ನಾನು ಈ ಮೊದಲು ಒಂದು ಪ್ರಕರಣದಲ್ಲಿ ಪತ್ರಾಂಕಿತ ಅಧಿಕಾರಿಯಾಗಿ ಪಾತ್ರ ವಹಿಸಿದ್ದೆ ಎನ್ನುತ್ತಾರೆ. ಆ ದಿನ ನಾನು ಕಾಲೇಜಿಗೆ ಹಾಜರಾಗಿದ್ದ ವಿಚಾರ ಪೊಲೀಸರಿಗೆ ಮೊದಲೇ ಮಾಹಿತಿ ಇರಲಿಲ್ಲ. ನಮ್ಮ ಕಾಲೇಜಿನಲ್ಲಿ ಚಲನ-ವಲನ ಪುಸ್ತಕವನ್ನ ಇಟ್ಟಿಲ್ಲ. ನಾನು ಆ ದಿನ ಕಾಲೇಜಿಗೆ ಕರ್ತವ್ಯಕ್ಕೆ ಹಾಜರಾಗಿದ್ದೆ ಎಂದು ತೋರಿಸಲು ನ್ಯಾಯಾಲಯದ ಮುಂದೆ ಯಾವುದೇ ದಾಖಲೆ ಕೊಟ್ಟಿಲ್ಲ, ಸಾಕ್ಷಿ ಮುಂದುವರಿದು ನಾನು ಹಾಜರಾತಿ ಪುಸ್ತಕಕ್ಕೆ ಸಹಿ ಮಾಡಿದ್ದೆ ಎನ್ನುತ್ತಾರೆ. ಸದರಿ ಹಾಜರಾತಿ ಪುಸ್ತಕವನ್ನ ಪೊಲೀಸರಿಗೆ ಕೊಡಲು ನನಗೇನೂ ತೊಂದರೆ ಇರಲಿಲ್ಲ. ಎಲ್ಲಾ ಕಾಲೇಜುಗಳಲ್ಲಿ ಚಲನ-ವಲನ ಪುಸ್ತಕವನ್ನ ಕಡ್ಡಾಯವಾಗಿ ಇಟ್ಟಿರಬೇಕು ಎಂದರೆ ಸರಿ. ದಾಳಿ ಪೂರ್ವ ಮಹಜರ್ ನಲ್ಲಿ ಜೀಪ್ ನಲ್ಲಿ ಏನೆಲ್ಲಾ ಪರಿಕರಗಳು ಇದ್ದವು ಎಂದು ಬರೆಯಲಾಗಿದೆ. ಜೀಪ್ ನಲ್ಲಿ ಇತ್ತು ಎಂದು ಹೇಳಲಾದ ಡಿಜಿಟಲ್ ತಕ್ಕಡಿ

ಯಾವ ಕಂಪನಿಯದ್ದು ಎಂದು ಈಗ ನೆನಪಿಲ್ಲ. ದಾಳಿ ನಡೆಯಿತು ಎನ್ನಲಾದ ಪೂರ್ವದಲ್ಲಿ ಯಾವುದೇ ಅಂಗಶೋಧನೆ ಮಾಡಿಕೊಂಡಿಲ್ಲ, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ದಾಳಿ ನಡೆಯಿತು ಎನ್ನಲಾದ ಜಾಗದ ಚೆಕ್ಕುಬಂಧಿ ಹೇಳಲು ಗೊತ್ತಿಲ್ಲ. ನಿಪಿ-9 ರಲ್ಲಿ ಕಾಣುವಂತೆ ಅಕ್ಕಪಕ್ಕದಲ್ಲಿ ಇರುವ ಮನೆಗಳು ಯಾರಿಗೆ ಸೇರಿದ್ದವು ಎಂದು ನನಗೆ ಗೊತ್ತಿಲ್ಲ. ಕಚ್ಚಾ ನಕಾಶೆಯಲ್ಲಿ ತೋರಿಸಿರುವ ಲಕ್ಷಣಗಳು ಮತ್ತು ಫೋಟೋದಲ್ಲಿ ಕಾಣುವ ಚಿತ್ರಣಕ್ಕೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ನಾನು ಮೊದಲಬಾರಿಗೆ ಆ ಸ್ಥಳಕ್ಕೆ ಹೋಗಿದ್ದರಿಂದ ಗೊತ್ತಾಗುತ್ತಿಲ್ಲ ಎನ್ನುತ್ತಾರೆ. ನ್ಯಾಯಾಲಯದ ಮುಂದೆ ಅಮಾನತ್ತುಪಡಿಸಲಾಯಿತು ಎಂದು ಹೇಳಲಾದ ಹಳದಿ ಕವರ್ ಇಲ್ಲ ಎಂದರೆ ಸಾಕ್ಷಿ ಮಹಜರ್ ಕಾಲಕ್ಕೆ ಅಮಾನತ್ತುಪಡಿಸಲಾಯಿತು ಅದರ ನಂತರ ಏನಾಯಿತು ಎಂದು ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಹಳದಿ ಕವರ್ ನಲ್ಲಿ ಮಾಲು ಬಿಡಿಬಿಡಿಯಾಗಿ ಇತ್ತು. ನಿಪಿ-9 ರ ಫೋಟೋದಲ್ಲಿ ಮಾಲು ಬಿಡಿಬಿಡಿಯಾಗಿ ಇರುವುದು ಕಾಣಿಸುತ್ತಿಲ್ಲ ಎಂದರೆ ಸರಿಯಲ್ಲ. ಮಾರಾಟ ಮಾಡುವ ಉದ್ದೇಶ ಇದ್ದಿದ್ದರೆ ಮಾಲು ಪೌಚುಗಳಲ್ಲಿ ಇಡಲಾಗುತ್ತಿತ್ತು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಮು.ಮಾ.3 ಮತ್ತು 4 ರ ಮೊಬೈಲ್ ಗಳನ್ನ ಇದೇ ಮೊದಲಬಾರಿಗೆ ನೋಡುತ್ತಿದ್ದೇನೆಯೇ ಹೊರತು ಈ ಹಿಂದೆ ನೋಡಿಲ್ಲ ಎಂದರೆ ಸರಿಯಲ್ಲ. ಸದರಿ ಮೊಬೈಲ್ ಗಳು ಯಾವ ಬಣ್ಣದ್ದವು ಎಂದರೆ ಸಾಕ್ಷಿ ದಾಳಿಯಾಗಿ 2 ವರ್ಷವಾಗಿರುವುದರಿಂದ ಅವುಗಳ ಬಣ್ಣ ಈಗ ನೆನಪಿಲ್ಲ ಎನ್ನುತ್ತಾರೆ. ಮು.ಮಾ.3 ಮತ್ತು 4 ರ ಮೊಬೈಲ್ ಗಳು ನಿರ್ದಿಷ್ಟವಾಗಿ ಯಾರಿಗೆ ಸೇರಿದ್ದವು ಎಂದರೆ ಸಾಕ್ಷಿ ಓಪೋ ಮೊಬೈಲ್ ಇಬ್ರಾಹಿಂ ಬಳಿ ಇತ್ತು

ಮತ್ತೊಂದು ಸಂಶೀರ್ ಬಳಿ ಇತ್ತು ಎನ್ನುತ್ತಾರೆ. ಸದರಿ ಮೊಬೈಲ್ ನಲ್ಲಿ ಯಾವ ಯಾವ ನಂಬರ್ ಗೆ ಆ ದಿನ ಕಾಲ್ ಹೋಗಿತ್ತು ಎಂದು ತಪಾಸಣೆ ಮಾಡಿರುವುದಿಲ್ಲ. ನಿಪಿ-3 ರ ಫೋಟೋದಲ್ಲಿ 2 ವಾಹನಗಳು ಇವೆ ಎಂದರೆ ಸರಿ. ನಿಪಿ-3 ರ ಫೋಟೋದಲ್ಲಿ ಕಾಣುವ ಜಾಗ ಸಿ.ಇ.ಎನ್ ಪೊಲೀಸ್ ಠಾಣಾ ಆವರಣ ಆಗಿರುತ್ತದೆ, ಸಾಕ್ಷಿ ಮುಂದುವರಿದು ನಾನು ಪೊಲೀಸ್ ಜೀಪ್ ನಲ್ಲಿ ಸ್ಥಳಕ್ಕೆ ಹೋದೆ ಎನ್ನುತ್ತಾರೆ. ಒಂದೇ ವಾಹನದಲ್ಲಿ 10 ಜನ ಹೋಗಲು ಸಾಧ್ಯವಿಲ್ಲ ಎಂದರೆ ಸಾಕ್ಷಿ ನಾನು ಮತ್ತು ಚಾಸಾ-1 ರವರು ಮುಂದಿನ ಸೀಟ್ ನಲ್ಲಿ ಕೂತಿದ್ದೆವು, ಇನ್ನೂ 4 ಜನ ಹಿಂದಿನ ಸೀಟ್ ನಲ್ಲಿ ಕೂತಿದ್ದೆವು ಎನ್ನುತ್ತಾರೆ. 8 ಜನರೂ ಒಂದೇ ವಾಹನದಲ್ಲಿ ಹೋಗಿರುತ್ತೀರಾ ಎಂದರೆ ಸಾಕ್ಷಿ ಅಷ್ಟು ಜನ ಹೋಗಿಲ್ಲ ಎನ್ನುತ್ತಾರೆ. ದಾಳಿಗೆ ಹೋಗಿಲ್ಲ, ದಾಖಲೆಗಳನ್ನ ನಾವು ಮತ್ತು ಪೊಲೀಸರು ಸೇರಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಘಟನೆ ನಡೆಯಿತು ಎನ್ನಲಾದ ಸ್ಥಳಕ್ಕೆ ಮಥಾಯಿಸ್ ಟವರ್, ಐ.ಜಿ ರಸ್ತೆ ಮಾರ್ಗವಾಗಿ ಹೋದೆವು. ದಾಳಿ ಕಾಲಕ್ಕೆ ಘಟನಾ ಸ್ಥಳದಿಂದ ಸುಮಾರು 150 ಮೀಟರ್ ದೂರಿದಲ್ಲಿ ಜೀಪ್ ನಿಲ್ಲಿಸಿದ್ದೆವು. ಘಟನೆ ನಡೆಯಿತು ಎನ್ನಲಾದ ಸ್ಥಳದ ನಿರ್ದಿಷ್ಟ ಗುರುತನ್ನ ನನಗೆ ಹೇಳಲು ನೆನಪಿಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿದ್ದ ವಾಹನ ನೀಲಿ ಬಣ್ಣದ ಪೊಲೀಸ್ ಜೀಪ್ ಆಗಿತ್ತು. ದಾಳಿ ಪೂರ್ವದಲ್ಲಿ ಜೀಪ್ ಅನ್ನ ಆರೋಪಿತರು ನಿಂತಿದ್ದ ಜಾಗದಿಂದ ಸುಮಾರು 150 ಮೀಟರ್ ದೂರದಲ್ಲಿ ಉತ್ತರಕ್ಕೆ ಮುಖ ಮಾಡಿ ನಿಲ್ಲಿಸಿದ್ದೆವು. ಘಟನೆ ನಡೆಯಿತು ಎನ್ನಲಾದ ಸ್ಥಳಕ್ಕೆ ಹೋಗಿಲ್ಲ, ಯಾವುದೇ ದಾಳಿ ಮಾಡಿಲ್ಲ, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು

ಯಾವುದೇ ಮಾಲನ್ನ ಸ್ವಾಧೀನ ಹೊಂದಿರಲಿಲ್ಲ ಮತ್ತು ಅವರ ಸ್ವಾಧೀನದಿಂದ ಯಾವುದೇ ಮಾಲನ್ನ ಅಮಾನತ್ತುಪಡಿಸಿಕೊಂಡಿಲ್ಲ, ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಮು.ಮಾ.ಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅಮಾನತ್ತುಪಡಿಸಲಾಯಿತು ಎಂದು ಹೇಳಲಾದ ಮೊಬೈಲ್ ಗಳ ಸಿಮ್ ನಂಬರ್ ಅನ್ನ ಮಹಜರ್ ನಲ್ಲಿ ಬರೆಯಲಾಯಿತು. ಅಮಾನತ್ತುಪಡಿಸಲಾಯಿತು ಎಂದು ಹೇಳಲಾದ ಮೊಬೈಲ್ ಗಳಲ್ಲಿ ಯಾವ ಕಂಪನಿಯ ಸಿಮ್ ಇದ್ದವು ಎಂದು ಮಾಹಿತಿ ಇಲ್ಲ. ಸಿಮ್ ಗಳನ್ನ ನೋಡಿದರೆ ಅದು ಯಾವ ಕಂಪನಿಯದ್ದು ಎಂದು ಹೇಳಬಹುದು ಎಂದರೆ ಸರಿ. ಆ ದಿನ ಯಾವುದೇ ಮು.ಮಾ.ಗಳನ್ನ ಅಮಾನತ್ತುಪಡಿಸಿಕೊಂಡಿಲ್ಲ ಆದ್ದರಿಂದ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪೊಲೀಸ್ ಜೀಪ್ ಹೋದರೆ ಸಾರ್ವಜನಿಕರಿಗೆ ಸಾಮಾನ್ಯವಾಗಿ ಕಾಣಿಸುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. 60 ಫೀಟ್ ರಸ್ತೆಯಲ್ಲಿ ಜನ ಸಂದಣಿ ಇರುತ್ತದೆ ಎಂದರೆ ಸರಿಯಲ್ಲ. ಘಟನೆ ನಡೆಯಿತು ಎನ್ನಲಾದ ಸ್ಥಳದಲ್ಲಿ ಸಾರ್ವಜನಿಕರು ಓಡಾಡುತ್ತಿದ್ದುದು ಕಾಣಿಸಿರುತ್ತದೆಯೇ ಎಂದರೆ ರಸ್ತೆಗಳಲ್ಲಿ ಸಾರ್ವಜನಿಕರು ಹೋಗುತ್ತಿದ್ದುದು ಕಾಣಿಸಿರುತ್ತದೆ ಎನ್ನುತ್ತಾರೆ. ಆರೋಪಿತರ ಬಳಿ ಬಂದು ಹೋಗುತ್ತಿದ್ದರು ಎಂದು ಹೇಳಲಾದವರ ಹೆಸರನ್ನ ಪೊಲೀಸರು ತಿಳಿದುಕೊಂಡಿರುವುದಿಲ್ಲ. ಆರೋಪಿತರ ಬಳಿ ಬಂದಿದ್ದರು ಎಂದು ಹೇಳಲಾದವರು ಆರೋಪಿತರ ಬಳಿ ಏನು ಮಾತನಾಡುತ್ತಿದ್ದರು ಎಂದು ನಾವು ದೂರ ಇದ್ದುದರಿಂದ ಕೇಳಿಸಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲದೇ ಇದ್ದರೂ ನ್ಯಾಯಾಲಯದ

ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ದಿನ ಪ್ರಭಾರೆ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನ್ಯಾಯಾಲಯದ ಮುಂದೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನಗಳ ನೊಂದಣಿ ಸಂಖ್ಯೆ 2 ವರ್ಷ ಆಗಿರುವುದರಿಂದ ಈಗ ನೆನಪಿಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ಸವಾಲುಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ